## 12. ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಅಭಿಮತ – ಕೈಜೋಡಿಸಲು  ಯುವ ಸಮುದಾಯಕ್ಕೆ ಕರೆ



**ದಿನಾಂಕ: 19–09–2020 ರಂದು ಖ್ಯಾತ ಜಾನಪದ ವಿದ್ವಾಂಸರಾಗಿದ್ದ ದಿವಂಗತ ಡಾ. ಎಲ್.ಆರ್.ಹೆಗಡೆ ಅವರ ಅಪ್ರಕಟಿತ ಆರು ಜಾನಪದ ಡಿಜಿಟಲ್ ಪುಸ್ತಕಗಳನ್ನು  ಮಾನ್ಯ ಸಭಾಧ್ಯಕ್ಷರು ವಿಧಾನಸೌಧದಲ್ಲಿ ಲೋಕಾರ್ಪಣೆ ಮಾಡಿದ ಸಂದರ್ಭ. ಈ ಕಾರ್ಯಕ್ರಮದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಟಿ.ಎಸ್.ನಾಗಾಭರಣ ಅವರು ಉಪಸ್ಥಿತರಿದ್ದರು**

ರಾಜ್ಯದಲ್ಲಿ ಅದ್ಭುತವಾದ ಜಾನಪದ ಪರಂಪರೆ ಇದ್ದು, ಅದನ್ನು ಸಂರಕ್ಷಿಸಲು ಮತ್ತು ಡಿಜಿಟಲೀಕರಣ ಮಾಡಲು ಯುವ ಸಮುದಾಯ ಮುಂದಾಗಬೇಕು ಎಂದು ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಕರೆ ನೀಡಿದ್ದಾರೆ.

ವಿಧಾನ ಸೌಧದಲ್ಲಿ ಮಿತ್ರಮಾಧ್ಯಮ ಟ್ರಸ್ಟ್ ಹಮ್ಮಿಕೊಂಡಿದ್ದ ಡಾ: ಎಲ್. ಆರ್. ಹೆಗಡೆಯವರ ಅಪ್ರಕಟಿತ ಜಾನಪದ ಸಂಗ್ರಹಗಳ ಆರು ಡಿಜಿಟಲ್ ಪುಸ್ತಕಗಳನ್ನು ಬಿಡುಗಡೆ ಮಾಡಿ ಮಾತನಾಡಿದರು. ಜಾನಪದ ಸಂಗ್ರಹಕಾರ ಎಲ್. ಆರ್. ಹೆಗಡೆ ಅವರ ಜನ್ಮ ಶತಾಬ್ದಿ ವರ್ಷವು ಸಮೀಪಿಸುತ್ತಿದ್ದು ಆ ವೇಳೆಗೆ ಅವರ ಇನ್ನುಳಿದ ಅಪ್ರಕಟಿತ ಸಂಗ್ರಹಗಳನ್ನು ಪ್ರಕಟಿಸಲು ಸರ್ಕಾರ ಮತ್ತು ಸಮುದಾಯಗಳು ಮುಂದಾಗಬೇಕು. ಉತ್ತರ ಕನ್ನಡದ ವೈವಿಧ್ಯಮಯ ಜಾನಪದ ಸಂಸ್ಕೃತಿಯ ಸಂಗ್ರಹ ಎಲ್. ಆರ್. ಹೆಗಡೆಯವರ ಅಪಾರ ಜೀವನ ನಿಷ್ಠೆಯಿಂದ ಸಾಧ್ಯವಾಯಿತು ಎಂದರು.

**ಹಲವು ಕೃತಿ ಬಿಡುಗಡೆ:** ನಾಮಧಾರಿಗಳ ಆಡು ಭಾಷೆಗಳ ಕಥೆಗಳು, ಆಯ್ದ ನಾಮಧಾರಿ ಕಥನ ಗೀತೆಗಳು, ಹಾಲಕ್ಕಿ ಕಥೆಗಳು, ಶುದ್ಧ ಭಾಷೆಯ ಕಥೆಗಳು, ಕೋಲಾಟದ ಪದಗಳು, ಆಯ್ಕೆ ಮಾಡಿದ ಜಾನಪದ ಕಥೆಗಳು ಈ ಸಂಗ್ರಹಗಳು ಕಾರ್ಯಕ್ರಮದಲ್ಲಿ ಬಿಡುಗಡೆಯಾದವು. ಕೃತಿಗಳ ಸಂಪಾದಕಿ, ಡಾ:ಎಲ್.ಆರ್.ಹೆಗಡೆ ಪುತ್ರಿ ರೇಣುಕಾ ರಾಮಕೃಷ್ಣ ಭಟ್ಟ ಮಾತನಾಡಿ, ಹಳ್ಳಿ ಔಷಧಿಗಳನ್ನೂ ತಿಳಿದಿದ್ದ ಡಾ: ಹೆಗಡೆಯವರು ಎಲ್ಲರಿಗೂ ಬೇಕಾದ ವ್ಯಕ್ತಿತ್ವ ಹೊಂದಿದ್ದರು ಎಂದು ಮೆಲುಕುಹಾಕಿದರು.

ಫೇಸ್ ಬುಕ್‌ನಂತಹ 'ಡಿಜಿಟಲ್ ಜನಪದ' ರೇ ಈ ಆರು ಪುಸ್ತಕಗಳ ಅಕ್ಷರ ಜೋಡಣೆ ಮತ್ತು ಮುಖಚಿತ್ರ ರಚನೆ ಮಾಡಿದ್ದಾರೆ. ಡಿಜಿಟಲ್ ಜನಪದದಿಂದ ಪರಂಪರಾಗತ ಜನಪದ ಉಳಿಸುವ ಕೆಲಸವಾಗುತ್ತಿರುವುದು ಉತ್ತಮ ಬೆಳವಣಿಗೆಯೆಂದು ಮಿತ್ರ ಮಾಧ್ಯಮ ಟ್ರಸ್ಟಿ ಮತ್ತು ಮುಖ್ಯಮಂತ್ರಿಯವರ ಇ – ಆಡಳಿತ ಸಲಹೆಗಾರ ಬೇಳೂರು ಸುದರ್ಶನ ಹೇಳಿದರು.

ಮುಕ್ತ ಜ್ಞಾನಕ್ಕಾಗಿ ಈ ರೀತಿಯಲ್ಲಿ ಅಚ್ಚುಕಟ್ಟಾದ ಪ್ರಕಟಣಾ ಕಾರ್ಯ ಕೈಗೊಂಡ ಕ್ರಮವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಶ್ಲಾಘಿಸಿದರು. ಸರ್ಕಾರದ 'ಕಣಜ' ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಪುಸ್ತಕಗಳ ಸಾಂಕೇತಿಕ ಪ್ರತಿಗಳನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ನಿರ್ದೇಶಕ ಎಸ್. ರಂಗಪ್ಪ ಸ್ವೀಕರಿಸಿದರು.

ಆಧಾರ:ವಿಜಯವಾಣಿ, ದಿನಾಂಕ:21.09.2020